

ಪೂರ್ವ:

ಕೋಟ್ಯಾನುಕೋಟಿ ವರ್ಷಗಳ ಹಿಂದೆ ಈ ಭೂಮಿ ಸೃಷ್ಟಿಯಾಯ್ತಲ್ಲ. ಆಗ ಸಾವಿರಾರು ವರ್ಷಗಳ ಕಾಲ ಬರೀ ಮಳೆ, ಬರೀ ಬಿಸಿಲೇ ಬಂದೂ... ಬಂದೂ ಭೂಮಿಗೆ ಬೇಸರವಾಗಿ ಹೋಯಿತು.

ಈ ಏಕತಾನತೆಯ ಬದಲಿಗೆ ಏನಾದರೂ ವಿನೂತನವಾದ ಕೆಲಸ ಮಾಡೋಣ ಎಂದು ಯೋಚಿಸಿದ ಪ್ರಕೃತಿದೇವಿ ಋತುಗಳನ್ನು ರಚನೆ ಮಾಡಿದಳು. ಅವುಗಳಿಗೆ ಬೇಸಿಗೆ, ಮಳೆ, ಚಳಿಗಾಲ ಎಂದು ಹೆಸರಿಟ್ಟು ಅವು ಅನುಕ್ರಮವಾಗಿ ಬರುವಂತೆ ಸೂಚನೆ ನೀಡಿದಳು.

ಆಗ ಮೂರು ಋತುಗಳ ಪೈಕಿ ಮಳೆಗಾಲದ್ದೇ ಜೋರು ಕಾರುಬಾರು ಆಗಿತ್ತು. ಭಾರೀ ಭಾರೀ ಕಗ್ಗಾಡುಗಳು, ನೋಡನೋಡನೆ ಗುದ್ದಾಡುವಂತೆ ತೋರುವ ಭಾರೀ ಬೆಟ್ಟಗಳು, ಸಮುದ್ರದಂತೆ